UN – 504

# ಮೂರನೇ ಸೆಮಿಸ್ಟರ್ ಬಿ.ಬಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2015
## (ಫ್ರೆಷರ್ಸ್) (ಸಿ.ಬಿ.ಸಿ.ಎಸ್.)
## (2015 – 16 ಅಂಡ್ ಆನ್‌ವರ್ಡ್ಸ್)
## ಕನ್ನಡ ಭಾಷಾ ಪತ್ರಿಕೆ – III
## ಸುವರ್ಣ ಸಂಪದ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 70

I. ಅ) ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. (1×6=6)

1) ಗಂಗಾಸುತಂ ಪೃಥಾಸುತ
ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೆಯೊಳ್ ।
ಗಾಂಗೇಯನ ಬಿಡೊಡಹಿತರ
ನಾಂ ಗೆಲೆ ತಳ್ತಿಱಿವೆನನ್ನೆಗಂ ಬಿಲ್ವಿಡಿಯೆಂ ॥

2) ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮಲೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ.

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (2×2=4)

1) ಅಕ್ಕಮಹಾದೇವಿ.
2) ಪಂಪ.
3) ಅಲ್ಲಮಪ್ರಭು.
4) ವಿಶ್ವಾಮಿತ್ರ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. (1×10=10)

1) ಕಣ್ಣಪ್ಪನ ಮುಗ್ಧ ಭಕ್ತಿಗೆ ಶಿವ ಹೇಗೆ ಪ್ರತಿಕ್ರಿಯೆ ತೋರುತ್ತಾನೆ ? ವಿವರಿಸಿ.
2) ಭೀಷ್ಮಾಚಾರ್ಯರ ಪಟ್ಟಾಭಿಷೇಕದ ಪ್ರಸಂಗವನ್ನು ಪರಿಚಯಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×5=10)

1) ಬೃಹತ್ ವಾಣಿಜ್ಯ ಘಟಕಗಳ ಕಾರ್ಯ ವೈಖರಿಯ ಬಗ್ಗೆ ನೋಮ್ ಚಾಮ್‌ಸ್ಕಿಯ ಅಭಿಪ್ರಾಯ.

2) ಮಾಹಿತಿ ತಂತ್ರಜ್ಞಾನ ಮತ್ತು ಇಂಗ್ಲೀಷ್‌ನ ಸಂಬಂಧ.

3) ಜಾಗತೀಕರಣ ಮಹಿಳಾ ಉದ್ಯಮದ ಮೇಲೆ ಬೀರಿರುವ ಪರಿಣಾಮ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಗಾಂಧೀಜಿ ಕಾಲ ಮತ್ತು ಇಂದಿನ ಕಾಲದ ಅರ್ಥವ್ಯವಸ್ಥೆ ಉತ್ಪಾದನಾ ತಂತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ವಿವರಿಸಿ.

2) ಮಹಿಳೆಯರ ಜೀವನದಲ್ಲಿ 'ದುಡಿಮೆ'ಯ ಅರ್ಥ ಸಾಧ್ಯತೆಗಳು ಯಾವುವು ? ಚರ್ಚಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಕನ್ನಡದ ಬ್ಲಾಗುಗಳನ್ನು ಪರಿಚಯಿಸಿ.

2) ಜನಪದ ಸಾಹಿತ್ಯ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ವಿದ್ಯಾವಂತರ ಮೂಢನಂಬಿಕೆ ಮತ್ತು ಅವಿದ್ಯಾವಂತರ ಮೂಢನಂಬಿಕೆಗಳನ್ನು ಕುರಿತು ಬರೆಯಿರಿ.

2) 'ಸಿನಿಮಾ ಒಂದು ಜಾನಪದ ಕಲೆ' ಹೇಗೆ ? ವಿಶ್ಲೇಷಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಪ್ರಚಲಿತವಿರುವ ಆನ್‌ಲೈನ್ ಮಾರುಕಟ್ಟೆಗಳು.

2) ಟಿಆರ್‌ಪಿ ನಡೆಸುವ ಸಂಸ್ಥೆ ಅನುಸರಿಸುವ ಮಾನದಂಡಗಳು.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಶರತ್‌ಬಾಬುವಿನ ಶೈಕ್ಷಣಿಕ ಸಾಧನೆಗೆ ಸಮಾಜ ತೋರಿದ ಪ್ರತಿಕ್ರಿಯೆಯನ್ನು ಪರಿಚಯಿಸಿ.

2) ಕೇರಳದ ವೀಕ್ಷಕರ ಮನಸ್ಥಿತಿಗೂ ನಮ್ಮವರ ಮನಸ್ಥಿತಿಗೂ ಇರುವ ವ್ಯತ್ಯಾಸವನ್ನು ವಿವರಿಸಿ.

---